# ಪರ್ಯಾಯ ಶೈಕ್ಷಣಿಕ ಯೋಜನೆ : 2021–22

**ತರಗತಿ : 9** **ತಿಂಗಳು : ಸೆಪ್ಟೆಂಬರ್–2021** **ವಿಷಯ : ದ್ವಿತೀಯ ಭಾಷೆ – ಕನ್ನಡ**

| ಕ್ರ.ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಸೆಪ್ಟೆಂಬರ್** ಮೊದಲನೆಯ ವಾರ | **ಗದ್ಯ – ಅರಳಿಕಟ್ಟೆ**<br>• ತಮ್ಮ ಸುತ್ತಮುತ್ತಲಿನ ಪ್ರಾಕೃತಿಕ ಪರಿಸರವನ್ನು ಪರಿಚಯಿಸಿಕೊಳ್ಳುವುದು | • ವಿದ್ಯಾರ್ಥಿಗಳಿಗೆ ತಾನು ವಾಸಿಸುವ ಪರಿಸರದಲ್ಲಿ ಕಂಡುಬರುವ ಸಸ್ಯಗಳಲ್ಲಿ ಔಷಧೀಯ ಗುಣಗಳುಳ್ಳ ಸಸ್ಯಗಳನ್ನು ಗಮನಿಸಿ ಪಟ್ಟಿ ಮಾಡಲು ತಿಳಿಸುವುದು.<br>**ಅಭ್ಯಾಸ ಹಾಳೆ 1** | |
| | | • ಕೊಟ್ಟಿರುವ ಪದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯ ರಚಿಸುವುದು | • ಲೇಖಕರ ಸ್ಥಳ, ಕಾಲ ಮತ್ತು ಕೃತಿಗಳಿಗೆ ಸಂಬಂಧಿಸಿದ ಪದಗಳನ್ನು ನೀಡಿ ಅವುಗಳನ್ನು ಬಳಸಿಕೊಂಡು ವಾಕ್ಯರೂಪದಲ್ಲಿ ಬರೆದು ಲೇಖಕರ ಪರಿಚಯ ಮಾಡಿಸುವುದು<br>• (ಆನ್ಲೈನ್ ತರಗತಿಗಳಲ್ಲಿ ಮಕ್ಕಳಿಂದ ಕವಿ ಪರಿಚಯ ಹೇಳಿಸಬಹುದು) | ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಸುವುದು<br>**ಅಭ್ಯಾಸ ಹಾಳೆ 2** |
| | | • ಪಠ್ಯವನ್ನು ಓದಿ ಸಾರಾಂಶವನ್ನು ತಮ್ಮದೇ ಆದ ಮಾತುಗಳಲ್ಲಿ ವಿವರಿಸುವುದು | • ಪಠ್ಯವನ್ನು ಮೌನವಾಗಿ ಓದಿ ಅರ್ಥ ಮಾಡಿಕೊಂಡು ಶೇಷಪ್ಪನವರ ದೈಹಿಕ ಸ್ಥಿತಿಗತಿಗಳು, ಅವರ ಉತ್ಕಟ ಬಯಕೆ ಮತ್ತು ಉದ್ದೇಶ ಸಾಧನೆಗೆ ಇದ್ದ ಅಡೆತಡೆಗಳ ಬಗ್ಗೆ ತಮ್ಮ ಮಾತುಗಳಲ್ಲಿ ವಿವರಿಸಲು ತಿಳಿಸುವುದು<br>• ವಿಭಕ್ತಿ ಪ್ರತ್ಯಯ ಹೊಂದಿರುವ ಪದಗಳನ್ನು ಗುರುತಿಸಿ ಬರೆಯಲು ತಿಳಿಸುವುದು | |
| | | • ಸಂಭಾಷಣೆಯ ರೂಪದಲ್ಲಿ | • ಪಾಠದಲ್ಲಿ ಬರುವ ಶೇಷಪ್ಪ ಹಾಗೂ ಲೇಖಕರ | |

| | | | | |
|---|---|---|---|---|
| | | ಪಠ್ಯವನ್ನು ಅಭಿವ್ಯಕ್ತಿಸುವುದು | ಸೋದರತ್ತೆಯವರ ನಡುವೆ ನಡೆಯುವ ಸಂಭಾಷಣೆಯನ್ನು ಸೂಕ್ತ ಸ್ವರಭಾರಗಳೊಂದಿಗೆ ಹೇಳಲು ತಿಳಿಸುವುದು. ಮಕ್ಕಳು ತಮ್ಮ ಸಂಭಾಷಣೆ ಮಾಡಿದ ಧ್ವನಿಯನ್ನು ಆಡಿಯೋ ರೆಕಾರ್ಡ್ ಮಾಡಿ ಹಂಚಿಕೊಳ್ಳಲು ಉತ್ತೇಜಿಸುವುದು | |
| | **ಸೆಪ್ಟೆಂಬರ್** ಎರಡನೆಯ ವಾರ | • ಮಕ್ಕಳಲ್ಲಿ ವಾಕ್ಯರಚನಾ ಸಾಮರ್ಥ್ಯವನ್ನು ಬೆಳೆಸುವುದು | ಶೇಷಪ್ಪನವರ ಸಾರ್ಥಕ ಜೀವನವನ್ನು ಓದಿ ಅರ್ಥೈಸಿಕೊಳ್ಳುವುದು. ಮತ್ತು ಸಾರಾಂಶವನ್ನು ಸಂಕ್ಷಿಪ್ತವಾಗಿ ಬರೆಯಲು ತಿಳಿಸುವುದು. ಅರಳಿಮರದ ಮಹತ್ವವನ್ನು ವಿವರಿಸುವ ಚಟುವಟಿಕೆ<br>**ಅಭ್ಯಾಸ ಹಾಳೆ – 3** | ಶೇಷಪ್ಪನವರು ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು ಅವರಿಗಿದ್ದ ಅಡೆತಡೆಗಳನ್ನು ಕುರಿತು ಬರೆಯಿರಿ. |
| | | • ಸೈದ್ಧಾಂತಿಕ ವ್ಯಾಕರಣಾಂಶ ಪರಿಚಯಿಸುವುದು. | ದೇಶೀಯ ಮತ್ತು ಅನ್ಯದೇಶೀಯ ಪದಗಳ ಪರಿಚಯ ಮಾಡಿಕೊಡುವುದು (ಸಾಮಾನ್ಯವಾಗಿ ಕನ್ನಡ ಭಾಷೆಯಲ್ಲಿ ಬಳಕೆಯಲ್ಲಿರುವ)<br>**ಅಭ್ಯಾಸ ಹಾಳೆ–4** | ಘಟಕ ಪರೀಕ್ಷೆ |
| | | **ಪದ್ಯ – ಅಟ್ಟ ಹತ್ತಬೇಡ**<br>• ಬಂಡಾಯ ಸಾಹಿತ್ಯದ ಸಂಕ್ಷಿಪ್ತ ಪರಿಚಯ ಮಾಡುವುದು | ಕನ್ನಡ ಸಾಹಿತ್ಯದ ವಿವಿಧ ಸಾಹಿತ್ಯ ಪ್ರಕಾರಗಳು, ಬಂಡಾಯ ಸಾಹಿತ್ಯದ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸುವುದು. (ವಿವರಣೆ ಇರುವ ಆಡಿಯೋ ಕೇಳಿಸಬಹುದು) | |
| | | • ಮೌನ ಓದಿನ ಮೂಲಕ ವಿಷಯಗಳನ್ನು ಗ್ರಹಿಸುವುದು. | • ಡಾ ಎಲ್ ಹನುಮಂತಯ್ಯನವರ ಪರಿಚಯ ಭಾಗವನ್ನು ಮೌನವಾಗಿ ಓದಿಕೊಳ್ಳಲು ಮಕ್ಕಳಿಗೆ ತಿಳಿಸುವುದು. ನಂತರ ಓದಿದ ಅಂಶಗಳನ್ನು ಅರ್ಥಮಾಡಿಕೊಂಡು ವಾಕ್ಯರೂಪದಲ್ಲಿ ಕವಿ | |

| | | | | |
|---|---|---|---|---|
| | | | ಪರಿಚಯವನ್ನು ಬರೆಯಲು ತಿಳಿಸುವುದು | |
| | **ಸೆಪ್ಟೆಂಬರ್** ಮೂರನೆಯ ವಾರ | • ಸೂಕ್ತ ಸ್ವರಭಾರದೊಂದಿಗೆ ಅರ್ಥಪೂರ್ಣವಾಗಿ ವಾಚಿಸುವುದು. | • ಪದ್ಯಭಾಗವನ್ನು ಶಿಕ್ಷಕರು ಸೂಕ್ತ ಸ್ವರಭಾರದೊಂದಿಗೆ ಓದಿದ ಆಡಿಯೋ ಮಕ್ಕಳಿಗೆ ಕೇಳಿಸುವುದು. ನಂತರ ಮಕ್ಕಳು ಪದ್ಯವನ್ನು ಸ್ಪಷ್ಟವಾಗಿ ಸೂಕ್ತ ಸ್ವರಭಾರಗಳೊಂದಿಗೆ ಓದಲು ತಿಳಿಸುವುದು.<br>• (ಮಕ್ಕಳು ಪದ್ಯವನ್ನು ಓದಿ ಆಡಿಯೋ ರೆಕಾರ್ಡ್ ಮಾಡಿ ಕಳುಹಿಸಲು ಉತ್ತೇಜಿಸುವುದು) | |
| | | • ಭಾಷಾಂಶಗಳನ್ನು ಪರಿಚಯಿಸುವುದು | • ಕೊಟ್ಟಿರುವ ಪದಗಳನ್ನು ನಾಮಪದ– ಕ್ರಿಯಾಪದಗಳಾಗಿ ಬಳಸಿ ವಾಕ್ಯದಲ್ಲಿ ಪ್ರಯೋಗ ಮಾಡುವ ಚಟುವಟಿಕೆ<br>**ಅಭ್ಯಾಸ ಹಾಳೆ – 5** | |
| | | • ಪದ್ಯದ ಭಾವಾರ್ಥವನ್ನು ಗ್ರಹಿಸಿ ತಮ್ಮದೇ ಮಾತುಗಳಲ್ಲಿ ಅಭಿವ್ಯಕ್ತಿಸುವುದು | ಪದ್ಯಭಾಗದ ಭಾವಾರ್ಥವನ್ನು ಸರಳ ವಾಕ್ಯಗಳಲ್ಲಿ ವಿವರಿಸಿ ಹೇಳುವುದು. (ವಿವರಣೆ ಇರುವ ಆಡಿಯೋ ಬಳಸಬಹುದು)<br>ನಂತರ ಮಕ್ಕಳು ತಮ್ಮದೇ ಮಾತುಗಳಲ್ಲಿ ಪದ್ಯದ ಭಾವಾರ್ಥವನ್ನು ಹೇಳಲು ಪ್ರಯತ್ನಿಸುವಂತೆ ಪ್ರೇರೇಪಿಸುವುದು | ಪದ್ಯದ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ |
| | | • ನುಡಿಗಟ್ಟುಗಳನ್ನು ಪರಿಚಯಿಸುವುದು | • ಅಟ್ಟಹತ್ತಿಸು – ಅತಿಯಾಗಿ ಹೊಗಳು. ನಮ್ಮನ್ನು ಹೊಗಳಿ ಅಟ್ಟಹತ್ತಿಸುವವರನ್ನು ನಾವು ನಂಬಬಾರದು.<br>ಈ ರೀತಿಯ ವಿಶೇಷ ಅರ್ಥ ಹೊಂದಿರುವ ಪದಗಳನ್ನು ಪರಿಚಯಿಸುವುದು.<br>ಉದಾಹರಣೆಗಳನ್ನು ಪಟ್ಟಿ ಮಾಡಿಸುವುದು | |

| | | | | |
|---|---|---|---|---|
| | | • ಭಾಷಾಂಶಗಳನ್ನು ಗುರುತಿಸುವುದು | ವಿರುದ್ಧಾರ್ಥಕ ಪದಗಳನ್ನು, ಜೋಡಿಪದಗಳನ್ನು ಪಟ್ಟಿ ಮಾಡಿಸುವುದು<br>**ಅಭ್ಯಾಸ ಹಾಳೆ 6** | ಘಟಕ ಪರೀಕ್ಷೆ |
| | **ಸೆಪ್ಟೆಂಬರ್**<br>ನಾಲ್ಕನೆಯ ವಾರ | **ಪದ್ಯ – ಅವರು ಮತ್ತು ನಾವು**<br>• ದಲಿತ ಸಾಹಿತ್ಯದ ಲಕ್ಷಣಗಳನ್ನು ಪರಿಚಯ ಮಾಡಿಕೊಳ್ಳುವುದು | ಕನ್ನಡ ಸಾಹಿತ್ಯದ ವಿವಿಧ ಸಾಹಿತ್ಯ ಪ್ರಕಾರಗಳು, ದಲಿತ ಸಾಹಿತ್ಯದ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸುವುದು.<br>(ವಿವರಣೆ ಇರುವ ಆಡಿಯೋ ಕೇಳಿಸಬಹುದು) | |
| | | • ಎಲ್ಲಿ? ಯಾವಾಗ? ಯಾವುವು? ಮುಂತಾದ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಬೆಳೆಸುವುದು | • ಮಕ್ಕಳಿಗೆ ಕವಿ ಪರಿಚಯ ಭಾಗವನ್ನು ಓದಿಕೊಳ್ಳಲು ತಿಳಿಸುವುದು. ನಂತರ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. | ಕವಿಯ ಕಾಲ, ಸ್ಥಳ. ಕೃತಿಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ರೂಪಿಸಿ ಉತ್ತರಿಸಲು ತಿಳಿಸುವುದು |
| | | • ಪದ್ಯವಾಚನಾ ಸಾಮರ್ಥ್ಯವನ್ನು ಬೆಳೆಸುವುದು | • ಶಿಕ್ಷಕರು ಪದ್ಯವನ್ನು ಸೂಕ್ತ ಸ್ವರಭಾರದೊಂದಿಗೆ ಅರ್ಥಪೂರ್ಣವಾಗಿ ವಾಚನ ಮಾಡುವರು. ನಂತರ ಮಕ್ಕಳಿಂದ ವಾಚನ ಮಾಡಿಸುವುದು (ಆಡಿಯೋ ಬಳಸಬಹುದು) | |
| | | • ಪದ್ಯದ ಭಾವಾರ್ಥವನ್ನು ಅರ್ಥ ಮಾಡಿಕೊಂಡು ಯಾರು? ಏನು? ಯಾವುದು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುವುದು | ಪ್ರಶ್ನೋತ್ತರ ಚಟುವಟಿಕೆಯ ಮೂಲಕ ಪದ್ಯವನ್ನು ಅರ್ಥೈಸಿಕೊಳ್ಳುವರು<br>**ಅಭ್ಯಾಸ ಹಾಳೆ–7** | |
| | | • ಭಾಷಾಂಶಗಳನ್ನು ತಿಳಿಯುವುದು | ಕನ್ನಡ ಸಂಧಿಗಳ ನಿಯಮಗಳನ್ನು ಅರ್ಥ ಮಾಡಿಕೊಂಡು ಸಂಧಿ ಪದಗಳನ್ನು ಗುರುತಿಸಿ ಸಂಧಿಯನ್ನು ಹೆಸರಿಸುವರು.**ಅಭ್ಯಾಸ ಹಾಳೆ– 8**<br>ಪದ್ಯಭಾಗದಲ್ಲಿ ಬಂದಿರುವ ಕ್ರಿಯಾಪದಗಳನ್ನು ಪಟ್ಟಿ ಮಾಡಿಸುವುದು | ಘಟಕ ಪರೀಕ್ಷೆ |

**ತರಗತಿ : 9 ತಿಂಗಳು : ಸೆಪ್ಟೆಂಬರ್–2021 ವಿಷಯ : ದ್ವಿತೀಯ ಭಾಷೆ – ಕನ್ನಡ**

## ಅಭ್ಯಾಸ ಹಾಳೆ 1

### ಅರಳಿಕಟ್ಟೆ

ನಿಮ್ಮ ಸುತ್ತಮುತ್ತಲ ಪರಿಸರದಲ್ಲಿ ಕಂಡುಬರುವ ಔಷಧೀಯ ಗುಣಗಳುಳ್ಳ ಸಸ್ಯಗಳನ್ನು ಪಟ್ಟಿ ಮಾಡಿ ಅವುಗಳಲ್ಲಿ ಯಾವುದಾದರೂ ಒಂದು ಸಸ್ಯದ ಉಪಯೋಗಗಳನ್ನು ಕುರಿತು ಬರೆಯಿರಿ.

ಮಾದರಿ : ದಾಸವಾಳ

ಉಪಯೋಗಗಳು : ದಾಸವಾಳವನ್ನು ಬಳಸಿ ಹರ್ಬಲ್ ಚಹಾ ತಯಾರಿಸುತ್ತಾರೆ. ಇದು ರಕ್ತದ ಒತ್ತಡ ನಿವಾರಣೆಗೆ ಸಹಕಾರಿಯಾಗಿದೆ. ಅಲ್ಲದೆ ಮೂತ್ರ ಪಿಂಡಕ್ಕೆ ಸಂಬಂಧಿಸಿದ ಸಮಸ್ಯೆ ನಿವಾರಣೆಗಾಗಿ ಔಷಧಿ ತಯಾರಿಸಲು ಇದನ್ನು ಬಳಸುತ್ತಾರೆ. ತಲೆಗೂದಲು ಉದುರುವಿಕೆ ಸಮಸ್ಯೆಯನ್ನು ತಡೆಗಟ್ಟಲು ದಾಸವಾಳವನ್ನು ಬಳಸಲಾಗುತ್ತದೆ.

| **ಔಷಧೀಯ ಗುಣವುಳ್ಳ ಸಸ್ಯಗಳು** | | |
|---|---|---|
| ಅಮೃತಬಳ್ಳಿ | | |
| | | |
| | | |

| ಉಪಯೋಗಗಳು |
|---|
| |

## ಅಭ್ಯಾಸ ಹಾಳೆ 2

### ಅರಳಿಕಟ್ಟೆ

**ಕೆಳಗೆ ನೀಡಿರುವ ಅಂಶಗಳನ್ನು ಓದಿ, ಲೇಖಕರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ**

| | |
|---|---|
| ಲೇಖಕರ ಹೆಸರು : ಬಿ.ಜಿ.ಎಲ್.ಸ್ವಾಮಿ | ಕಾಲ:1916 |
| ಸ್ಥಳ: ಬೆಂಗಳೂರು | ಕೃತಿಗಳು: ದೌರ್ಗಂಧಿಕಾಪಹರಣ, ಶಾಸನಗಳಲ್ಲಿ ಗಿಡಮರಗಳು, ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ, ಹಸುರು ಹೊನ್ನು, ಪಂಚಕಲಶ ಗೋಪುರ, ಕಾಲೇಜು ರಂಗ, ಕಾಲೇಜು ತರಂಗ, ತಮಿಳು ತಲೆಗಳ ನಡುವೆ |
| ಪ್ರಶಸ್ತಿಗಳು : ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ | |
| | |

1. ಬಿ.ಜಿ.ಎಲ್ ಸ್ವಾಮಿಯವರ ಪೂರ್ಣ ಹೆಸರೇನು?

______________________________

______________________________

2. ಬಿ.ಜಿ.ಎಲ್.ಸ್ವಾಮಿಯವರ ತಂದೆ ಹೆಸರೇನು?

______________________________

______________________________

3. ಬಿ.ಜಿ.ಎಲ್.ಸ್ವಾಮಿಯವರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ?

______________________________

______________________________

# ಅಭ್ಯಾಸ ಹಾಳೆ 3

## ಅರಳಿಕಟ್ಟೆ

ಈ ಕೆಳಗೆ ನೀಡಿರುವ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಅರಳಿಮರವನ್ನು ಕುರಿತು ಕಿರು ಪ್ರಬಂಧವನ್ನು ಬರೆಯಿರಿ.

ಅಂಶಗಳು

- ಜನಜೀವನದಲ್ಲಿ ಅರಳಿಮರದ ಪಾತ್ರ
- ಹಿಂದಿನ ಕಾಲದಲ್ಲಿ ಅರಳಿಮರದ ಬಗ್ಗೆ ಜನಸಾಮಾನ್ಯರ ನಂಬಿಕೆಗಳು
- ವೈಜ್ಞಾನಿಕ ಹಿನ್ನೆಲೆಯಲ್ಲಿ ಅರಳಿಮರದ ಉಪಯೋಗಗಳು
- ವಿವಿಧ ಜೀವರಾಶಿಗಳಿಗೆ ಆಶ್ರಯತಾಣವಾಗಿ ಅರಳಿಮರ

## ಅಭ್ಯಾಸ ಹಾಳೆ 4

### ಅರಳಿಕಟ್ಟೆ

ಅರಳಿಕಟ್ಟೆ  ಗದ್ಯಭಾಗದಲ್ಲಿ ಬಳಕೆಯಾಗಿರುವ ಯಾವುದಾದರೂ ಹತ್ತು ಅನ್ಯದೇಶೀಯ ಪದಗಳನ್ನು ಪಟ್ಟಿ ಮಾಡಿ. ಮತ್ತು ಅವು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿವೆ ಎಂಬುದನ್ನು ತಿಳಿಸಿ

| ಅನ್ಯದೇಶೀಯ ಪದ | ಯಾವ ಭಾಷೆಯಿಂದ ಬಂದಿದೆ |
|---|---|
| ಮಾದರಿ: ಕಾಲೇಜು | ಆಂಗ್ಲ ಭಾಷೆ |
| | |
| | |
| | |
| | |
| | |
| | |
| | |
| | |
| | |
| | |

ತರಗತಿ : 9 ತಿಂಗಳು : ಸೆಪ್ಟೆಂಬರ್–2021 ವಿಷಯ : ದ್ವಿತೀಯ ಭಾಷೆ – ಕನ್ನಡ

## ಅಭ್ಯಾಸ ಹಾಳೆ 5

### ಅಟ್ಟ ಹತ್ತಬೇಡ

ಈ ಪದಗಳಿಗೆ ಮಾದರಿಯಂತೆ ನಾನಾರ್ಥ ಬರೆದು ವಾಕ್ಯದಲ್ಲಿ ಪ್ರಯೋಗಿಸಿ.

ಮಾದರಿ :

| | | | |
|---|---|---|---|
| ಮಾದರಿ | ಇಂಗು | ಅಡುಗೆಯ ಪದಾರ್ಥ | ಅಡುಗೆಯಲ್ಲಿ ಇಂಗು ಬಳಸುವುದು ಆರೋಗ್ಯಕ್ಕೆ ಒಳ್ಳೆಯದು |
| | | ಬತ್ತಿ ಹೋಗುವುದು | ಮಳೆ ಇಲ್ಲದೆ ಅಂತರ್ಜಲ ಇಂಗಿಹೋಗಿದೆ |

| | | |
|---|---|---|
| ಹತ್ತು | | |
| | | |
| ಬೇಡ | | |
| | | |
| ಅಲೆ | | |
| | | |
| ತಂದೆ | | |
| | | |
| ತೊರೆ | | |
| | | |
| ಕಾಡು | | |
| | | |
| ಮಡಿ | | |
| | | |
| ಕಳೆ | | |
| | | |

ಮಾದರಿಯಂತೆ ಐದು ಜೋಡಿಪದಗಳನ್ನು ಬರೆಯಿರಿ

ಮಾದರಿ : ಕಲ್ಲುಮುಳ್ಳು, ನೋವುನಲಿವು

| |
|---|
| |
| |
| |
| |
| |

ತರಗತಿ : 9 ತಿಂಗಳು : ಸೆಪ್ಟೆಂಬರ್–2021 ವಿಷಯ : ದ್ವಿತೀಯ ಭಾಷೆ – ಕನ್ನಡ

# ಅಭ್ಯಾಸ ಹಾಳೆ 6

## ಅಟ್ಟ ಹತ್ತಬೇಡ

ಈ ಪದಗಳ ವಿಶೇಷಾರ್ಥವನ್ನು ಗಮನಿಸಿ ಅದೇ ಅರ್ಥ ಬರುವಂತೆ ಸ್ವಂತ ವಾಕ್ಯದಲ್ಲಿ ಬಳಸಿ

| ಮಾದರಿ | ಹಿತ್ತಾಳೆ ಕಿವಿ | ಚಾಡಿ ಮಾತು ಕೇಳು |
|---|---|---|
| ಜಾಣರು ಯಾವಾಗಲೂ ಚಾಡಿ ಮಾತು ಕೇಳುವುದಿಲ್ಲ | | |
| ಜಾಣರು ಯಾವಾಗಲೂ ಹಿತ್ತಾಳೆ ಕಿವಿಯವರಂತೆ ವರ್ತಿಸುವುದಿಲ್ಲ | | |

| ದೂರದ ಬೆಟ್ಟ | ಕೈಗೆ ನಿಲುಕದ |
|---|---|
| | |
| | |
| ಅಟ್ಟ ಹತ್ತಿಸು | ಅತಿಯಾಗಿ ಹೊಗಳು |
| | |
| | |
| ಮೇಲೇರಿ ನಿಲ್ಲು | ಬಲಿಷ್ಠನಾಗು |
| | |
| | |

ವಿರುದ್ಧಾರ್ಥಕ ಪದಗಳನ್ನು ಹೊಂದಿಸಿ ಬರೆಯಿರಿ

| ಬೇಡ | ಇಳಿ | ಬೇಡ | ಬೇಕು |
|---|---|---|---|
| ನುಣುಪು | ಏಳಿಸು | | |
| ಬೀಳಿಸು | ಕೆಡವು | | |
| ದೂರ | ಅಸಹಜ | | |
| ಹತ್ತು | ಬೇಕು | | |
| ಸಹಜ | ಒರಟು | | |
| ಕಟ್ಟು | ಹತ್ತಿರ | | |

ತರಗತಿ : 9 ತಿಂಗಳು : ಸೆಪ್ಟೆಂಬರ್–2021 ವಿಷಯ : ದ್ವಿತೀಯ ಭಾಷೆ – ಕನ್ನಡ

## ಅಭ್ಯಾಸ ಹಾಳೆ 7

## ಅವರು ಮತ್ತು ನಾವು

**ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ' ಅವರು ಮತ್ತು ನಾವು' ಪದ್ಯದ ಆಕರ ಗ್ರಂಥ ಯಾವುದು?

______________________________

______________________________

2. 'ಅವರು ಮತ್ತು ನಾವು' ಕವಿತೆಯಲ್ಲಿ ಅವರು ಮತ್ತು ನಾವು ಎಂದರೆ ಯಾರು?

______________________________

______________________________

3. ನಾವು ತಿನ್ನುವುದಕ್ಕೆ ಅನ್ನ ಕೇಳಿದರೆ ಉಳ್ಳವರು ಕೊಟ್ಟಿದ್ದು ಏನು?

______________________________

______________________________

4. ಅವರು ತಿನ್ನುವ ಅನ್ನಕ್ಕೆ ಏನು ಬಿದ್ದಿದೆ?

______________________________

5. ಅವರು ಅನ್ನಕ್ಕಾಗಿ ಯಾರಲ್ಲಿ ಕೈಚಾಚುತ್ತಿದ್ದಾರೆ?

______________________________

______________________________

6. ಹುಳ ಬಿದ್ದ ಅಕ್ಕಿಯನ್ನು ಶೋಷಿತರು ಹೇಗೆ ಬಳಸಿಕೊಂಡರು?

______________________________

______________________________

7. ಶೋಷಿತರು ನೀರು ಕೇಳಿದಾಗ ಉಳ್ಳವರು ನೀರು ನೀಡಿದ ರೀತಿಯನ್ನು ತಿಳಿಸಿ.

______________________________

______________________________

8. ಶೋಷಿತರು ಶ್ರೀಮಂತರು ಸುರಿದ ನೀರನ್ನು ಹೇಗೆ ಬಳಸಿಕೊಂಡರು?

______________________________

______________________________

9. ಮಾನವನ ಎದೆಯನ್ನು ಕವಿ ಯಾವುದಕ್ಕೆ ಹೋಲಿಸಿದ್ದಾರೆ?

______________________________

______________________________

10. ಮನುಜ ಯಾವುದನ್ನು ತಿಳಿಯಬೇಕಿದೆ ಎಂದು ಕವಿ ಬಯಸುತ್ತಾರೆ?

______________________________

ತರಗತಿ : 9 ತಿಂಗಳು : ಸೆಪ್ಟೆಂಬರ್–2021 ವಿಷಯ : ದ್ವಿತೀಯ ಭಾಷೆ – ಕನ್ನಡ

## ಅಭ್ಯಾಸ ಹಾಳೆ–8

## ಕನ್ನಡ ಸಂಧಿಗಳು

| |
|---|
| **ಲೋಪ ಸಂಧಿ :** ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವದಲ್ಲಿರುವ ಸ್ವರವು ಅರ್ಥವು ಕೆಡದಿದ್ದ ಪಕ್ಷದಲ್ಲಿ ಮಾತ್ರ ಲೋಪವಾಗುವುದು. ಇದಕ್ಕೆ ಲೋಪಸಂಧಿಯೆಂದು ಹೆಸರು.<br>ಗೊತ್ತು + ಇಲ್ಲ = ಗೊತ್ತಿಲ್ಲ, ಮನದ + ಒಳಗೆ = ಮನದೊಳಗೆ, ಮಾತು + ಇಲ್ಲ = ಮಾತಿಲ್ಲ<br>ಉ + ಇ = ಇ ಅ + ಒ = ಒ ಉ + ಇ = ಇ |
| **ಆಗಮ ಸಂಧಿ:** ಸ್ವರದ ಮುಂದೆ ಸ್ವರವು ಬಂದಾಗ ಲೋಪಸಂಧಿ ಮಾಡಿದರೆ ಅರ್ಥವು ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ಮಧ್ಯದಲ್ಲಿ 'ಯ'ಕಾರವನ್ನೋ ಅಥವಾ ವಕಾರವನ್ನೋ ಹೊಸದಾಗಿ ಸೇರಿಸಿ ಹೇಳುತ್ತೇವೆ. ಇದಕ್ಕೆ 'ಆಗಮ ಸಂಧಿ' ಎನ್ನುವರು.<br>ಮರ + ಅನ್ನು = ಮರವನ್ನು , ಶಾಲೆ + ಇಂದ = ಶಾಲೆಯಿಂದ<br>ವ್ ಯ್ |
| **ಆದೇಶ ಸಂಧಿ :** ಸಂಧಿಯಾಗುವಾಗ ಉತ್ತರಪದದ ಆದಿಯಲ್ಲಿರುವ ಕ್, ತ್, ಪ್ ವ್ಯಂಜನಗಳಿಗೆ ಕ್ರಮವಾಗಿ ಗ್, ದ್, ಬ್ ವ್ಯಂಜನಗಳು ಆದೇಶವಾಗಿ ಬಂದರೆ ಅದನ್ನು ಆದೇಶ ಸಂಧಿ ಎನ್ನುವರು.<br>ಮಳೆ + ಕಾಲ = ಮಳೆಗಾಲ, ಬೆಟ್ಟ + ತಾವರೆ = ಬೆಟ್ಟದಾವರೆ, ಕಣ್ + ಪನಿ = ಕಂಬನಿ<br>ಕ್ ಗ್ ತ್ ದ್ ಪ್ ಬ್ |
| |

**ಮೇಲ್ಕಂಡ ಸಂಧಿಯ ನಿಯಮಗಳು ಹಾಗೂ ಉದಾಹರಣೆಗಳನ್ನು ಓದಿ ಅರ್ಥ ಮಾಡಿಕೊಂಡು ಕೆಳಗೆ ನೀಡಿರುವ ಸಂಧಿ ಪದಗಳನ್ನು ಬಿಡಿಸಿ, ನಿಯಮಗಳನ್ನು ಅನ್ವಯಿಸಿ ಸಂಧಿಯನ್ನು ಹೆಸರಿಸಿ.**

| ಮನವನ್ನು | ಮನ + ಅನ್ನು | ಆಗಮ ಸಂಧಿ |
|---|---|---|
| ಒಂದೊಂದು | | |
| ಹೊಸಗನ್ನಡ | | |
| ದಾರಿಯಲ್ಲಿ | | |
| ಮೈದೊಳೆ | | |
| ಹೂಬುಟ್ಟಿ | | |
| ನೀರನ್ನು | | |
| ಕೆರೆಯನ್ನು | | |